



# ಚೆಲುವಿನ ತಾಣ ಕಟ್ಟಿನಮಡಕೆ

ಚಿತ್ರ– ಲೇಖನ:
**ಕೆ.ಆರ್. ಉಮಾದೇವಿ ಉರಾಳ್**

ತುಂಗಾ, ಭದ್ರಾ, ಶರಾವತಿ, ಮಾಲತಿ, ವರಾಹಿ ನದಿಗಳಲ್ಲದೆ ಇನ್ನೂ ಹಲವಾರು ನದಿಗಳು ಉಗಮಿಸುವುದು ಪಶ್ಚಿಮಘಟ್ಟ ಸಾಲುಗಳಲ್ಲಿ. ಈ ಸಹ್ಯಾದ್ರಿಯ ಘಟ್ಟ ಸಾಲುಗಳ ಮಡಿಲಲ್ಲಿ ದಟ್ಟ ಕಾಡುಗಳ ನಡುವೆ ಇರುವ ತೀರ್ಥಹಳ್ಳಿ ತಾಲ್ಲೂಕಿನ ಶುಂಠಿಹಕ್ಕಲು ಗ್ರಾಮದ ಬೆಟ್ಟಗಳ ಸಾಲಿನಲ್ಲಿ ಹುಟ್ಟುವ ನದಿ ವರಾಹಿ. ಈ ನದಿಯ ದಡದ ಮೇಲಿನ ಮೊದಲನೆಯ ಊರೇ ಕೊಕ್ಕೋಡು. ಇಲ್ಲಿಂದ ಅರ್ಧ ಮೈಲಿ ದೂರದಲ್ಲಿರುವ ಕಟ್ಟಿನಮಡಕೆ ಎಂಬಲ್ಲಿನ ವರಾಹಿ ನದಿ ಹರಿವಿನ ತಾಣ, ಪ್ರಕೃತಿ ಮಾತೆಯ ಲಾಸ್ಯಮಯ ನರ್ತನದ ರಂಗಸ್ಥಳ ಎಂದರೆ ಅತಿಶಯೋಕ್ತಿಯಲ್ಲ. ಇಲ್ಲಿ ವರಾಹಿ, ಬಂಡೆ ಸಾಲುಗಳೆಡೆಯಲ್ಲಿ ಜುಳುಜುಳು ನಾದದೊಂದಿಗೆ ನರ್ತಿಸುವಂತೆ ಹರಿಯುತ್ತದೆ.

ತೀರ್ಥಹಳ್ಳಿ– ಆಗುಂಬೆ ಮಾರ್ಗದಲ್ಲಿ ನಾಲೂರಿನ ಬಲಕ್ಕೆ ನಾಲೂರು ಶುಂಠಿಹಕ್ಕಲು ರಸ್ತೆಯ ಮಾರ್ಗದಲ್ಲಿ ಕಟ್ಟಿನಮಡಕೆಗೆ ಬರುವಾಗ ತಿರುವುಗಳಿಂದ ಕೂಡಿದ ಇಕ್ಕಟ್ಟಾದ ರಸ್ತೆಯು ಹಾದು ಹೋಗುವುದೇ ನಿತ್ಯಹರಿದ್ವರ್ಣದ ಕಾಡಿನ ಹಸಿರು ಮುಕ್ಕಳಿಸುವ ಮರಗಳೆಡೆಯಲ್ಲಿ. ಅಲ್ಲಲ್ಲಿ ಭತ್ತದ ಗದ್ದೆಗಳ ಹಾಳೆಗಳು, ಅಡಿಕೆ ತೋಟದ ಕೋಗುಗಳು, ಇವುಗಳೆಡೆಯಲ್ಲಿ ಅಲ್ಲೊಂದು ಇಲ್ಲೊಂದು ಒಂಟಿಮನೆಗಳೆಲ್ಲ ಪ್ರಕೃತಿಯ ಹಸಿರು ಸೀರೆಗೆ ನೇಯ್ದ ಕಸೂತಿ ಚಿತ್ರಗಳಂತೆ ಕಾಣುತ್ತವೆ.

ಈ ಮಾರ್ಗದಲ್ಲಿ ಗಾರ್ಡರಗದ್ದೆ ಎಂಬ ಊರಿದೆ. ಇಲ್ಲಿನ ಕಾಡುಗಳ ಕ್ರೂರ ಮೃಗಗಳಿಗೆ ಅಂಜಿ ಯಾವ ಫಾರೆಸ್ಟ್ ಗಾರ್ಡ್ ಕೂಡ ಇಲ್ಲಿ ಉಳಿಯಲು ಅಂಜುತ್ತಿದ್ದಾಗ ಒಬ್ಬ ಗಾರ್ಡ್ ಧೈರ್ಯದಿಂದ ಕರ್ತವ್ಯ ನಿರತರಾದರಂತೆ. ಅದರಿಂದಾಗಿ ಊರಿಗೆ ಆ ಹೆಸರು ಬಂದಿತಂತೆ. ಈ ಗಾರ್ಡರಗದ್ದೆಯ ಮುಂದಿನ ಹೊಳೆಬಾಗಿಲು ಸ್ಟಾಪ್‌ನಲ್ಲಿ ಬಸ್‌ನಿಂದ ಇಳಿದು ಒಂದು ಕಿಲೋಮೀಟರ್ ನಡೆದರೆ ಕಟ್ಟಿನಮಡಕೆ ಸಿಗುತ್ತದೆ. ಇಲ್ಲಿಗೆ ಹೆಚ್ಚು ಬಸ್‌ಗಳಿಲ್ಲ.

ಸೆಪ್ಟೆಂಬರ್‌ನಿಂದ ಡಿಸೆಂಬರ್‌ವರೆಗೆ ಪ್ರಕೃತಿಯ ಸಿರಿ ಸವಿಯಬಹುದು. ಎಲೆ ಮರೆಯ ಕಾಯಿಯಂತಿರುವ ಕಟ್ಟಿನಮಡಕೆಗೆ ಬರುವವರೂ ಕಡಿಮೆ. ಹೀಗಾಗಿ ಇಲ್ಲಿನ ನಿರ್ಮಲ ಪ್ರಶಾಂತ ಸೌಂದರ್ಯ ಹಾಗೆಯೇ ಉಳಿದುಕೊಂಡಿದೆ.

ವರಾಹಿಯ ಉಗಮಸ್ಥಾನ ಮತ್ತು ಕೊಕ್ಕೋಡುಗಳ ನಡುವೆ ನದಿಯು ಸುಮಾರು ಐವತ್ತು ಅಡಿಗಳಷ್ಟು ಕೆಳಗೆ ಧುಮುಕುವ 'ಹಾರ್ನಕಲ್ ಅಬ್ಬಿ' ಎಂಬ ಜಲಪಾತವಿದೆ. ಹಾರಿದಂತೆ ಕಾಣುತ್ತಾ ಕಲ್ಲಿನ ಮೇಲೆ ಧುಮುಕಿ ಹರಿವ ಅಬ್ಬಿಗೆ ಗ್ರಾಮಸ್ಥರೇ ಈ ಹೆಸರಿಟ್ಟಿದ್ದಾರೆ. ಉಗಮದಿಂದ ಕಟ್ಟಿನಮಡಕೆಗೆ ಬಂಡೆಗಳೆಡೆಯಿಂದ ಒನಪು ವಯ್ಯಾರದಿಂದ ಹರಿದು ಬರುವ ವರಾಹಿಗೆ ಇಲ್ಲೂ ನಾಗತೀರ್ಥ ಎಂಬ ದಬದಬೆ ಇದೆ.

ಕಟ್ಟಿನಮಡಕೆಯ ವರಾಹಿ ನೀರಿಗೆ ಹಿಂದೆ ಅಡಿಕೆ ದಬ್ಬೆ, ಹೈಗನ ಮರದ ಕುಂಟೆ, ದರಗು, ಮಣ್ಣು ಹಾಕಿ ಬೇಸಾಯಕ್ಕಾಗಿ ನೀರಿಗೆ ತಡೆ ಕಟ್ಟುತ್ತಿದ್ದರು. 1945ರಿಂದ ಭದ್ರ ಸಿಮೆಂಟಿನ ಕಟ್ಟೆಯ ಪಿಕಪ್ ಡ್ಯಾಂ ಇದೆ. ಇದರಿಂದ ಪೈಪ್ ಮೂಲಕ ದೂರದವರೆಗೂ ನೀರಿನ ಹರಿವು ಸಾಧ್ಯವಾಗಿದೆ.

ಗ್ರಾಮೀಣರು ಹಾಲು ಚೆಲ್ಲುವ ಬೆಳದಿಂಗಳಲ್ಲಿ ಇಲ್ಲಿನ ಬಂಡೆಗಳ ಮೇಲೆ ಹಾಡುಹಸೆ ಎಂದು ಸಂಭ್ರಮಿಸುತ್ತಾ ಬೆಳದಿಂಗಳೂಟ ಮಾಡುವ ಪರಿಪಾಟವಿತ್ತಂತೆ. ಆ ಬೆಳದಿಂಗಳ ಔತಣದ ಸೊಬಗಿಗೆ ಮೆರಗು ನೀಡಲು, ಇಲ್ಲಿನ ಬಂಡೆಗಳೆಡೆಯ ಸಹಜ ಕೊರಕಲನ್ನೇ ಒಲೆಯಂತೆ ಬಳಸಿ ಒಂದಾದರೂ ಪದಾರ್ಥವನ್ನು ಇಲ್ಲೇ ಬೇಯಿಸಲಾಗುತ್ತಿತ್ತು ಎಂದು ಇಲ್ಲಿನ ಹಿರಿಯರಾದ ಕಾಗಿನಕೊಡಿಗೆ ಸುಬ್ರಾವ್ ನೆನಪಿಸಿಕೊಳ್ಳುತ್ತಾರೆ. ಇವರ ನೇತೃತ್ವದಲ್ಲಿ ಮೂವತ್ತು ವರ್ಷಗಳ ಹಿಂದೆ ಮೂವತ್ತು ಜನರ ತಂಡವೊಂದು ವರಾಹಿ ನದಿ ಮೂಲ ಅನ್ವೇಷಣೆಯ ಚಾರಣ ಕೈಗೊಂಡು ಅದರಲ್ಲಿ ಯಶಸ್ವಿಯಾಗಿತ್ತು.

ವರಾಹಿ ನದಿಗೆ ಮಾಣಿ ಎಂಬಲ್ಲಿ ಕಟ್ಟಿದ ಅಣೆಕಟ್ಟು ಹಾಗೂ ರಾಜ್ಯದ ಪ್ರಪ್ರಥಮ ವರಾಹಿ ಭೂಗರ್ಭ ಜಲವಿದ್ಯುದಾಗಾರ ಯೋಜನೆಗಾಗಿ ಎಂಭತ್ತರ ದಶಕದಲ್ಲಿ ಸುತ್ತಮುತ್ತಲ ನೂರಾರು ರೈತಾಪಿ ಕುಟುಂಬಗಳ ಭೂಮಿ ಮುಳುಗಡೆಯಾಗಿ ಅವರೆಲ್ಲ ಬೇರೆಡೆ ಬದುಕು ಕಟ್ಟಿಕೊಳ್ಳಬೇಕಾಯಿತು. ಭೂಮಿ ಮುಳುಗಡೆಯೊಂದಿಗೆ ತಮ್ಮ ಜೀವನಕ್ರಮ, ಸಂಪ್ರದಾಯ, ಸಂಸ್ಕೃತಿ ಎಲ್ಲದರ ಮುಳುಗಡೆಯಾದಂತಹ ಅತೀವ ಸಂಕಟ ಜನರದಾಗಿತ್ತು. ಸಾವಿರಾರು ಹೆಕ್ಟೇರ್ ಅರಣ್ಯ, ಅರಣ್ಯವನ್ನು ಅವಲಂಬಿಸಿದ ವೈವಿಧ್ಯಮಯ ಪ್ರಾಣಿ ಪಕ್ಷಿ ಸಂಕುಲದ ನಾಶವಾಗಿತ್ತು.